ಅಸಲು ದಾವಾ ನಂಃ **84/2021**

**ಪಿ.ಡಬ್ಲ್ಯೂ- 01**

**ದಿನಾಂಕಃ 14-02-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ ವಿ.ಜಿ.ಪಿ., ವಾದಿ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆಸಿರುವ ಅಂಶಗಳು ಸರಿ ಹಾಗೂ ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ದಿನಾಂಕಃ 07-06-1978 ರ ಮೂಲ ಕ್ರಯದ ಕರಾರು ಪತ್ರವನ್ನು ನಿಪಿ-1 ಅಂತ, ನಿಪಿ-1 ರ ಕ್ರಯದ ಕರಾರು ಪತ್ರಕ್ಕೆ ಮುಂದ್ರಾಕ ಶುಲ್ಕ ಹಾಗೂ ದಂಡ ಪಾವತಿಸಿರುವ ಕುರಿತು ನೀಡಿರುವ ದಿನಾಂಕಃ 04-03-2021 ರ ಪತ್ರಗಳನ್ನು ಕ್ರಮವಾಗಿ ನಿಪಿ-2 ರಿಂದ 4 ಅಂತ, ಗಣಕೀಕೃತ ಪಹಣಿ ಪತ್ರಿಕೆಯನ್ನು ನಿಪಿ-5 ಅಂತ, 3 ಕೈ ಬರಹ ಪರಣಿ ಪತ್ರಿಕೆಗಳ ದೃತಿಕೃತ ನಕಲುಗಳನ್ನು ಕ್ರಮವಾಗಿ ನಿಪಿ- 6 ರಿಂದ 8 ಅಂತ, ಕಂದಾಯ ರಸೀದಿಯನ್ನು ನಿಪಿ-9 ಅಂತ, 3 ಛಾಯ ಚಿತ್ರಗಳನ್ನು ಹಾಗೂ 2 ರಸೀದಿಗಳನ್ನು ಕ್ರಮವಾಗಿ ನಿಪಿ-10 ರಿಂದ 14 ಅಂತ, ದಿನಾಂಕಃ 10-02-2021 ರ ಕಾನೂನು ಬದ್ದ ನೋಟಿಸ್ ನ ಕಚೇರಿ ಪ್ರತಿಯನ್ನು ನಿಪಿ-15 ಅಂತ, 4 ಅಂಚೆ ರಸೀದಿಗಳನ್ನು ಕ್ರಮವಾಗಿ ನಿಪಿ-16 ರಿಂದ 19 ಅಂತ, ಅಂಚೆ ಸ್ವೀಕೃತಿಯನ್ನು ನಿಪಿ-20 ಅಂತ, 2 ಅಂಚೆ ಲಕೋಟೆಗಳನ್ನು ನಿಪಿ-21 ಮತ್ತು 22 ಅಂತ, ಸದರಿ ಅಂಚೆ ಲಕೋಟೆಗಳನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ತೆಗೆದು ಅವುಗಳಲ್ಲಿದ್ದ ಮೂಲ ನೋಟಿಸ್ ಗಳನ್ನು ಕ್ರಮವಾಗಿ ನಿಪಿ-21(ಎ) ಮತ್ತು 22(ಎ) ಅಂತ, ದಿನಾಂಕಃ 24-02-2021 ರ ಪ್ರತ್ಯುತ್ತರವನ್ನು ನಿಪಿ-23 ಅಂತ ಗುರುತಿಸಲಾಯಿತು.

**(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಸಿ/ಸಿ. ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.